14. ಮಾನ್ಯ ಕೃಷಿ ಸಚಿವರ ಹೇಳಿಕೆ.

ವಿಷಯ:– ಕೃಷಿ ವಿಮಾ ಯೋಜನೆಯನ್ನು ಜುಲೈ 31ರವರೆಗೆ ವಿಸ್ತರಣೆ ಮಾಡಿರುವ ಬಗ್ಗೆ.

ಶ್ರೀ ಕೃಷ್ಣಬೈರೇಗೌಡ (ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳು, ಬೆಳೆ ವಿಮೆ ಯೋಜನೆಗೆ ಜೂನ್ 30 ಕೊನೆಯ ದಿನವಾಗಿತ್ತು. ಮುಂಗಾರು ದುರ್ಬಲವಾಗಿರುವುದರಿಂದ ಅದನ್ನು ಜುಲೈ 31ಕ್ಕೆ ವಿಸ್ತರಿಸಬೇಕು ಎಂದು ಹಿಂದೆ ಈ ಸದನದಲ್ಲಿ ಕೆಲವು ಸದಸ್ಯರು ಕೇಳಿದ್ದರು. ಜೂನ್ 28ಕ್ಕೆ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದು, ಮಾರ್ಪಡಿಸಿದ ಕೃಷಿ ವಿಮಾ ಯೋಜನೆಯನ್ನು ಜುಲೈ 31ರವರೆಗೆ ವಿಸ್ತರಣೆ ಮಾಡಿದ್ದೇವೆ. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಎಂದು ಬೇರೆ ಇದೆ. ಅದರಲ್ಲಿ ಕೆಲವು ಬೆಳೆಗಳು, ಪ್ರಮುಖವಾಗಿ ಹತ್ತಿ, ಈರುಳ್ಳಿ, ಆಲೂಗಡ್ಡೆ, ಮೆಣಸಿನಕಾಯಿ, ದ್ರಾಕ್ಷಿ ಇಂಥವುಗಳೆಲ್ಲಾ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಬರುತ್ತವೆ. ಅದನ್ನು ಆ ಸಂದರ್ಭದಲ್ಲಿ ನಾವು ವಿಸ್ತರಣೆ ಮಾಡುವುದಕ್ಕೆ ಆಗಿರಲಿಲ್ಲ. ಏಕೆಂದರೆ, ವಿಮಾ ಕಂಪನಿಗಳವರು ಆ ಸಂದರ್ಭದಲ್ಲಿ ವಿಸ್ತರಣೆಗೆ ಇನ್ನೂ ಒಪ್ಪಿರಲಿಲ್ಲ. ಅದನ್ನೂ ವಿಸ್ತರಣೆ ಮಾಡಬೇಕು ಎಂದು ಅನೇಕ ಸದಸ್ಯರಿಂದ, ರೈತರಿಂದ ಒತ್ತಾಯ ಬಂದಿತ್ತು. ಅದರ ಹಿನ್ನಲೆಯಲ್ಲಿ ನಮ್ಮ ಅಭಿವೃದ್ಧಿ ಆಯುಕ್ತರು ಆ ಕಂಪನಿಗಳವರನ್ನೆಲ್ಲ ಕರೆಸಿ ಸಭೆಯನ್ನೂ ಸಹ ಮಾಡಿದ್ದು, ಇವತ್ತು ನಾವು ಆ ಆದೇಶವನ್ನು ಹೊರಡಿಸುತ್ತಿದ್ದೇವೆ. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿಯಲ್ಲಿ ಹತ್ತಿ ಹಾಗೂ ಇತರ ತೋಟಗಾರಿಕಾ ಬೆಳೆಗಳು, ವಾಣಿಜ್ಯ ಬೆಳೆಗಳೇನು ಬರುತ್ತವೆ ಅವುಗಳಿಗೂ ಸಹ ಈ ವರ್ಷ ಮುಂಗಾರು ದುರ್ಬಲ ಇರುವುದರಿಂದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನೂ ಸಹ ಈ ತಿಂಗಳ 31ರವರೆಗೆ ವಿಸ್ತರಣೆ ಮಾಡಿ ಇವತ್ತು ಆದೇಶ ಹೊರಡಿಸುತ್ತಿದ್ದೇವೆ ಎಂದು ತಮ್ಮ ಮುಖಾಂತರ ಸದನ ಹಾಗೂ ರೈತರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಶ್ರೀ ಗೋವಿಂದ ಎಂ ಕಾರಜೋಳ:– ಅದರಲ್ಲಿ ಕಬ್ಬನ್ನೂ ಸೇರಿಸುತ್ತಾರೆಯೇ?

ಶ್ರೀ ಜಗದೀಶ ಶೆಟ್ಟರ್:– ಅದರಲ್ಲಿ ಕಬ್ಬು ಬೆಳೆಯನ್ನೂ ಸೇರಿಸಿ.

ಶ್ರೀ ಕೃಷ್ಣ ಬೈರೇಗೌಡ:– ಅದನ್ನು ತಿಳಿದುಕೊಂಡು ಹೇಳುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ:– ತಿಳಿದುಕೊಳ್ಳುವುದಲ್ಲ, ಅದನ್ನೂ ಸೇರಿಸಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಸೇರಿಸುವುದು ಒಂದು ಕಡೆ ಇರಲಿ. ಇನ್ನೊಂದು ವಿಷಯವೆಂದರೆ, ಇವತ್ತು ರೈತರು ಬೆಳೆ ವಿಮೆ ತುಂಬಲು ಹೋದಂಥ ಸಂದರ್ಭದಲ್ಲಿ ಯಾವುದೇ ಬ್ಯಾಂಕಿನವರೂ ಕೂಡ ಬೆಳೆ ವಿಮೆಯನ್ನು ತುಂಬಿಸಿಕೊಳ್ಳುತ್ತಿಲ್ಲ. ಸರ್ಕಾರದಿಂದ ನಿರ್ದಿಷ್ಟವಾದ ಆದೇಶ ಕಳುಹಿಸಬೇಕು.

ಅಧ್ಯಕ್ಷರು:– ಇವತ್ತೇ G.O. ಹೊರಡಿಸುತ್ತಿದ್ದಾರೆ.

ಶ್ರೀ ವೈ.ಎಸ್.ವಿ. ದತ್ತಾ:– IFFCO-Tokio General Insurance ಅವರ ಮುಖಾಂತರ ನಮಗೆ ಆದೇಶ ಬಂದರೆ ಮಾತ್ರ ನಾವು ಒಪ್ಪಿಕೊಳ್ಳುತ್ತೇವೆ, ನಾವು Government circularಅನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಬ್ಯಾಂಕ್ ಮ್ಯಾನೇಜರ್‌ಗಳು ಹೇಳುತ್ತಿದ್ದಾರೆ. ಹಾಗಾಗಿ, ಎಲ್ಲ ರೈತರು ಬ್ಯಾಂಕುಗಳಿಗೆ ಹೋಗಿ ವಾಪಸ್ಸು ಬರುತ್ತಿದ್ದಾರೆ.

ಅಧ್ಯಕ್ಷರು:– ಸರ್ಕಾರಿ ಆದೇಶವನ್ನು ಉಲ್ಲಂಘನೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ವೈ.ಎಸ್.ವಿ. ದತ್ತಾ:– ಮಾಡಿದ್ದಾರೆ. ಈಗ ಬೇಕಾದರೂ ನನ್ನ ಜೊತೆ ಬನ್ನಿ. ಬ್ಯಾಂಕಿನವರು ಮಾಡುತ್ತಿದ್ದಾರೆ. ಕೆನರಾ ಬ್ಯಾಂಕಿನವರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಈ ಬ್ಯಾಂಕುಗಳ ಮ್ಯಾನೇಜರ್‌ಗಳು ನಾವು ಸರ್ಕ್ಯುಲರ್‌ಅನ್ನು ಒಪ್ಪುವುದಿಲ್ಲ ಎಂದು ಹೇಳುತ್ತಿದ್ದಾರೆ. ಬ್ಯಾಂಕಿನವರು ಮಾತ್ರ ಅದಕ್ಕೆ ಉಪ್ಪೂ ಹಾಕುವುದಿಲ್ಲ, ಸೊಪ್ಪೂ ಹಾಕುವುದಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಎಲ್ಲ ತಹಶೀಲ್ದಾರರು ದೃಢೀಕರಣ ಪತ್ರ ಕೊಡಲಿ.

ಶ್ರೀ ಕೃಷ್ಣ ಬೈರೇಗೌಡ:– ನಾವು ತಕ್ಷಣ ಎರಡೂ ವಿಮಾ ಯೋಜನೆಗಳಿಗೆ ಸಂಬಂಧಪಟ್ಟಹಾಗೆ ಇವತ್ತು ಮತ್ತೊಂದು ಸರ್ಕಾರಿ ಆದೇಶವನ್ನು ಹೊರಡಿಸುತ್ತೇವೆ. ಎಲ್ಲಿ ಈ ರೀತಿ ಅಸಹಕಾರವಾಗುತ್ತಿದೆ ಎನ್ನುವುದನ್ನು ತಿಳಿಸಿ. ಒಂದು ಕಂಪನಿಯ ಹೆಸರನ್ನು ತಾವು ಹೇಳಿದ್ದೀರಿ. ಇನ್ನು ಯಾವುದೇ ಇದ್ದರೂ ಸಹ ದಯವಿಟ್ಟು ಲಿಖಿತವಾಗಿ ನಮಗೆ ಕೊಟ್ಟರೆ ತಕ್ಷಣವಾಗಿ ಬಗೆಹರಿಸಲು ನಮಗೂ ಸಹ ಸಹಾಯವಾಗುತ್ತದೆ. ಆ ಸಹಕಾರವನ್ನು ತಮ್ಮಿಂದ ನಾನು ಬಯಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– Weather based crop insurance schemeಗೆ ಸಂಬಂಧಿಸಿದಂತೆ ಒಂದು ERGO General Insurance Company ಮತ್ತೊಂದು IFFCO-Tokio General Insurance Company, ಇವೆರಡಕ್ಕೆ ನೀವು ಕಳುಹಿಸಿ. In turn ಅವರು ಬ್ಯಾಂಕುಗಳಿಗೆ inform ಮಾಡುವ ಹಾಗೆ ಮಾಡಿ.

ಶ್ರೀ ಕೃಷ್ಣ ಬೈರೇಗೌಡ:– ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ನಾವು ಇವತ್ತು ಆದೇಶವನ್ನು ಹೊರಡಿಸುತ್ತಿದ್ದೇವೆ. ಹಾಗಾಗಿ ಅದು ಇವತ್ತಿನಿಂದ ಮುಂದುವರೆದು ಅದು ಜುಲೈ 31 ರವರೆಗೆ ಜಾರಿಗೆ ಬರುತ್ತದೆ. ಎಲ್ಲಿಯಾದರೂ ಇಂಥ ಘಟನೆಯಾದರೆ ನಿಮ್ಮ ಗಮನಕ್ಕೆ ಬಂದರೆ ಅದನ್ನು ಲಿಖಿತವಾಗಿ ನಮಗೆ ಕೊಟ್ಟರೆ ಸಹಾಯವಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಳೆಯಿಲ್ಲದೇ ಕಬ್ಬಿನ ಬೆಳೆ ಹಾಳಾಗಿದೆ, ಕಬ್ಬನ್ನೂ ಸೇರಿಸಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನೀವು ನಿಮ್ಮ ಅಧಿಕಾರಿಗಳನ್ನು ಕೇಳಿದರೆ ಅವರು ಏನು ಹೇಳುತ್ತಾರೆ ಎಂದರೆ ವಿಮಾ ಕಂತು ಜಾಸ್ತಿಯಾಗುತ್ತದೆ, ಆದ್ದರಿಂದ ಅದು ಬೇಡ ಎಂದು ಹೇಳುತ್ತಾರೆ. ದಯವಿಟ್ಟು ಅವರ ಮಾತನ್ನು ಕೇಳಬೇಡಿ, ಕಬ್ಬಿನ ಬೆಳೆಯನ್ನೂ ಸೇರಿಸಿ.

ಅಧ್ಯಕ್ಷರು:– ಆಯಿತು, ಈಗ ಬೋಪಯ್ಯನವರು. ಅರಣ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಿ.

5. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ

ಬೇಡಿಕೆ ಸಂಖ್ಯೆ:– 8

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಸಾರ್ವಜನಿಕರು ಅರಣ್ಯ ಇಲಾಖೆಯ ಮೇಲೆ ಟೀಕೆ ಮಾಡುತ್ತಿರುವುದು ಅಥವಾ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಸಮಸ್ಯೆಗಳೆಲ್ಲಾ ಮಲೆನಾಡು ಭಾಗದಲ್ಲಿ ಮಾತ್ರ ಇದೆ ಎಂದು ನಾನು ಮೊದಲಿಗೆ ಯೋಚನೆ ಮಾಡಿದೆ. ಆದರೆ ಮೊನ್ನೆ ಶಿವಲಿಂಗೇಗೌಡರು ಮಾತನಾಡುತ್ತಾ, ನನ್ನ ಊರಿನಲ್ಲಿ ಮರವೇ ಇಲ್ಲ, ಆ ಜಾಗವನ್ನೂ ಅರಣ್ಯ ಎಂದು ಹೇಳುತ್ತಿದ್ದಾರೆ ಎಂದು ಹೇಳಿದರು. ಅರಣ್ಯ ಇಲಾಖೆಯ ಕಾರ್ಯವೈಖರಿಯಿಂದಾಗಿ ಈ ಎಲ್ಲ ಸಮಸ್ಯೆಗಳು ಆಗುತ್ತಿವೆ. Organization structure of Forest Department ಎಂದು ಕೊಟ್ಟಿದ್ದಾರೆ. ಅಲ್ಲಿಗೆ ಮುಖ್ಯಸ್ಥರಾದ Principal Secretaryಯವರದ್ದೂ ಇದರಲ್ಲಿ ಕಾಣುತ್ತಿಲ್ಲ, ಮಂತ್ರಿಗಳದ್ದೂ ಕಾಣುತ್ತಿಲ್ಲ. Principal Chief Conservator of Forests (Head of Forests-Force). ಇನ್ನೊಬ್ಬರು Principal Chief Conservator of Forests (Wild Life Warden). ಅವರ ಕೆಳಗಿರುವ ಅಧಿಕಾರಿಗಳ ಪಟ್ಟಿಯನ್ನು ನೋಡಿದರೆ, ಅವರಿಗೆ ಅರಣ್ಯ ಭವನದೊಳಗೆ ಏನು ಕೆಲಸ ಎಂದು ನನಗೇ ಗೊತ್ತಾಗುವುದಿಲ್ಲ. Additional Principal Chief Conservator of Forests (Evaluation, Working Plan and Training, Bangalore). ಇನ್ನೊಬ್ಬರು, Additional Principal Chief Conservator of Forests (Development). ಅವರ ಕೆಳಗೆ ಮತ್ತೊಂದಿಷ್ಟು ಅಧಿಕಾರಿಗಳು. Additional Principal Conservator of Forests (Head Quarters), ಅವರ ಕೈಕೆಳಗೆ ಮತ್ತೊಂದಿಷ್ಟು ಅಧಿಕಾರಿಗಳು. ಎಲ್ಲರೂ C.F., C.C.F. cadreನವರು.